

**ನಟ ದುನಿಯಾ ವಿಜಯ್ ಮಗಳು ರಿತನ್ಯಾ, ‘ಜವರ’ ಸಿನಿಮಾ ಮೂಲಕ ಚಂದನವನಕ್ಕೆ ನಾಯಕನಟಿಯಾಗಿ ಪದಾರ್ಪಣೆ ಮಾಡಿದ್ದಾರೆ. ಅಪ್ಪನ ಜೊತೆಗೆ ‘ಲ್ಯಾಂಡ್‌ಲಾರ್ಡ್’ನಲ್ಲಿ ಬೆಳ್ಳಿತೆರೆಗೆ ಪರಿಚಿತರಾಗಿರುವ ಅವರು, ಸಿನಿಮಾರಂಗದಲ್ಲಿನ ತಮ್ಮ ಕನಸುಗಳನ್ನು ಹಂಚಿಕೊಂಡಿದ್ದಾರೆ.**

ನಿರ್ಧಾರವಾಗಿತ್ತು. ನಾನು ನಟನೆಗೆ ಬರುತ್ತೇನೆ ಎಂದಾಗ ಅಪ್ಪ ಹಲವು ಸಲಹೆಗಳನ್ನು ನೀಡಿದರು. ಹೇಗೆ ಇರಬೇಕು, ಯಾವ ರೀತಿ ನಡೆದುಕೊಳ್ಳಬೇಕು ಎಂಬ ವಿಷಯಗಳಿಂದ ಹಿಡಿದು ವರ್ಕೌಟ್, ಡಯೆಟ್ ಎಲ್ಲದರಲ್ಲಿಯೂ ನಿಯಮಗಳನ್ನು ಪಾಲಿಸಬೇಕೆಂದು ಕಟ್ಟುನಿಟ್ಟಾಗಿದ್ದರು. ಸಿನಿಮಾರಂಗಕ್ಕೆ ಬರಲು ಇಷ್ಟವಿದ್ದರೆ ಇವನ್ನೆಲ್ಲ ಅನುಸರಿಸಬೇಕು ಎನ್ನುತ್ತಿದ್ದರು. ಆ ಸಲಹೆಗಳಿಂದ ಈಗ ಬಹಳ ಅನುಕೂಲವಾಗುತ್ತಿದೆ.

◆ ನಟನೆಗೆ ಬರಲು ಯಾವ ರೀತಿ ಸಿದ್ಧತೆಗಳನ್ನು ಮಾಡಿಕೊಂಡಿದ್ದಿರಿ?

ಮುಂಬೈನ ಅನುಪಮ್ ಖೇರ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯ ತರಬೇತಿ ಪಡೆದುಕೊಂಡಿದ್ದೆ. ಮನೆಯಲ್ಲಿ ಒಂದಷ್ಟು ಸಲಹೆಗಳು, ಇನ್‌ಪುಟ್‌ಗಳು ಇದ್ದೇ ಇದ್ದವು. ಶಿಕ್ಷಕರೊಬ್ಬರು ಮನೆಗೇ ಬಂದು ಮಾರ್ಗದರ್ಶನ ನೀಡುತ್ತಿದ್ದರು. ಬಹಳಷ್ಟು ಸಿನಿಮಾಗಳನ್ನು ನೋಡುತ್ತಿದ್ದೆ. ಇದರೊಂದಿಗೆ ನಟನೆಗೆ ಗಟ್ಟಿ ತಳಹದಿ ರೂಪಿಸಿಕೊಟ್ಟಿದ್ದು ನಾಟಕಗಳು. ರಂಗತಂಡವೊಂದರ ಜೊತೆಗೆ ನಮ್ಮ ನೆಲದ ಹಲವು ನಾಟಕಗಳಲ್ಲಿ ಅಭಿನಯಿಸಿದೆ. ಇವೆಲ್ಲವೂ ಅಡಿಪಾಯವಾದವು.

◆ ರಂಗಭೂಮಿಯಲ್ಲಿನ ನಿಮ್ಮ ಅನುಭವಗಳು?

ರಂಗತಂಡದ ಜೊತೆ ಕೆಲಸ ಮಾಡಿದ್ದು ಬೇರೆಯದ್ದೇ ಅನುಭವ. ರಂಗಭೂಮಿ ನಮ್ಮನ್ನು ವಿನೀತರನ್ನಾಗಿ ಮಾಡುತ್ತದೆ. ಎಲ್ಲ ರೀತಿಯ ಕೆಲಸಗಳನ್ನು ಎಲ್ಲರೂ ಮಾಡುವುದರಿಂದ ಸಮಾನತೆಯ ಭಾವ ಬೆಳೆಯುತ್ತದೆ. ನಮ್ಮನ್ನು ಉತ್ತಮ ರೀತಿಯಲ್ಲಿ ರೂಪಿಸುತ್ತದೆ. ಜೀವನದ ಪಾಠಗಳನ್ನು ಕಲಿಸುತ್ತದೆ. ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿದ್ದು ರಂಗಭೂಮಿಯೇ. ಸಿನಿಮಾದಲ್ಲಿದ್ದರೂ ರಂಗಭೂಮಿಯಲ್ಲಿಯೂ ಕೆಲಸ ಮುಂದುವರೆಸಬೇಕು ಎನ್ನುವ ಆಸೆಯಿದೆ.

◆ ಸ್ಟಾರ್ ಮಕ್ಕಳಿಗೆ ಅವಕಾಶಗಳು ಸಿಗುವುದು ಬಹಳ ಸುಲಭ ಎನ್ನುವ ಮಾತಿದೆ. ನಿಮ್ಮ ಅಭಿಪ್ರಾಯ?

ಬೇರೆಯವರಿಗೆ ಹೋಲಿಸಿದರೆ ಆರಂಭಿಕ ದಿನಗಳಲ್ಲಿ ಸಿನಿಮಾ ಕಲಾವಿದರ ಮಕ್ಕಳಿಗೆ ಅವಕಾಶಗಳು ಬೇಗ ಸಿಗುತ್ತವೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆರಂಭದಲ್ಲಿ ಒಂದೆರಡು ಸಿನಿಮಾಗಳು ಸಿಗಬಹುದು. ಅದಾದ ಮೇಲೆ ಅವರು ಮುಂದುವರೆಯಬೇಕೆಂದರೆ ಈ ರಂಗಕ್ಕೆ ಅವಶ್ಯವಿರುವ ಪ್ರತಿಭೆ ಇದ್ದೇ ಇರಬೇಕು. ಯಾರೂ ಸ್ಟಾರ್ ಮಕ್ಕಳು ಎಂದು ಸುಮ್ಮನೆ ಅವಕಾಶಗಳನ್ನು ನೀಡುತ್ತಾ ಹೋಗುವುದಿಲ್ಲ. ನಮ್ಮ ಕೆಲಸದಿಂದಷ್ಟೇ ಒಂದು ಗುರುತು ಸಿಗಲು ಸಾಧ್ಯ. ಆ ಗುರುತು ಅವಕಾಶಗಳನ್ನು ಸೃಷ್ಟಿಸುತ್ತದೆ. ಅವಕಾಶಗಳು ಸಿಕ್ಕುವುದು ಸುಲಭ, ಆದರೆ ಉಳಿದುಕೊಳ್ಳುವುದು ಪ್ರತಿಭೆ ಮೇಲೆಯೇ.

◆ ಸಿನಿಮಾಗಳ ಕುರಿತ ನಿಮ್ಮ ನಿರೀಕ್ಷೆ?

ನನ್ನ ಪರ್ಫಾರ್ಮೆನ್ಸ್‌ಗೆ ಎಲ್ಲಿ ಅವಕಾಶವಿದೆಯೋ ಆ ಸಿನಿಮಾ ಮಾಡಲು ಇಷ್ಟಪಡುತ್ತೇನೆ. ನನ್ನ ಪಾತ್ರವನ್ನು ಹೇಗೆ ಬರೆದಿದ್ದಾರೆ, ಅಲ್ಲಿ ನನ್ನ ನಟನೆಗೆ ಎಷ್ಟು ಅವಕಾಶವಿದೆ ಎಂಬುದನ್ನು ಗಮನಿಸುತ್ತೇನೆ. ‘ಜವರ’ ಸಿನಿಮಾವನ್ನೂ ಆ ಆಧಾರದ ಮೇಲೆ ಒಪ್ಪಿಕೊಂಡದ್ದು. ‘ಲ್ಯಾಂಡ್‌ಲಾರ್ಡ್’ನಲ್ಲಿ ಇರುವುದು ಕೂಡ ಸವಾಲಿನ ಪಾತ್ರ. ಈಗ ಆ ಸಿನಿಮಾವನ್ನು ಹಿಂತಿರುಗಿ ನೋಡಿದರೆ, ಎಷ್ಟು ದೊಡ್ಡ ಕಲಾವಿದರ ಜೊತೆಗೆ ನಾನು ಪುಟ್ಟ ಕಲಾವಿದೆ ನಟಿಸಿದ್ದೇನೆ ಎಂದು ಅಚ್ಚರಿಯಾಗುತ್ತದೆ.

◆ ನಿಮ್ಮ ಮುಂದಿನ ನಡೆ?

‘ಜವರ’ ಆರಂಭವಾಗಿದೆ. ಬೇರೆ ಸಿನಿಮಾ ಮಾತುಕತೆಗಳು ಸಾಗಿವೆ. ಶೀಘ್ರದಲ್ಲಿಯೇ ಮತ್ತೊಂದು ಸಿನಿಮಾ ಘೋಷಣೆಯಾಗಲಿದೆ. ■

# ‘ಪ್ರೀತಿಯ ನಾನಾ ರೂಪಗಳ ಅನ್ವೇಷಣೆ’

“ಲವ್ ಮಾಕ್ಟೇಲ್” ಸರಣಿಯ ಪ್ರತಿ ಭಾಗ ಕೂಡ ಪ್ರೀತಿಯ ಅನ್ವೇಷಣೆಯನ್ನು ಒಳಗೊಂಡಿದೆ. ಪ್ರೀತಿಯ ಹಲವು ರೂಪಗಳನ್ನು ತೋರುವುದೇ ಸರಣಿಯ ಉದ್ದೇಶ’ ಎಂದು ಹೇಳಿದ್ದಾರೆ ನಟ ಡಾರ್ಲಿಂಗ್ ಕೃಷ್ಣ. ಈ ಮೂರನೇ ಸರಣಿ ಅಪ್ಪ ಮಗಳ ನಡುವಿನ ಸುಂದರ ನಂಟನ್ನು ಬಿಡಿಸಿಡುವ ವಾಹಿನಿ ಎಂದು ವಿವರಿಸಿದ್ದಾರೆ.

‘ಲವ್ ಮಾಕ್ಟೇಲ್’ ಸಿನಿಮಾದಿಂದ ನಟನೆಯೊಂದಿಗೆ ನಿರ್ದೇಶನಕ್ಕೂ ಕಾಲಿಟ್ಟವರು ನಟ ಡಾರ್ಲಿಂಗ್ ಕೃಷ್ಣ. 2020ರಲ್ಲಿ ತೆರೆಕಂಡ ಈ ಸಿನಿಮಾ ಹಿಟ್ ಆಗುವುದರೊಂದಿಗೆ ನಟ ಕೃಷ್ಣ ಹಾಗೂ ನಟಿ ಮಿಲನಾ ನಾಗರಾಜ್ ಅವರ ಸಿನಿಪಯಣಕ್ಕೆ ತಿರುವನ್ನೂ ನೀಡಿತ್ತು. ಎರಡು ವರ್ಷಗಳ ಅಂತರದಲ್ಲಿ ‘ಲವ್ ಮಾಕ್ಟೇಲ್ 2’ ತೆರೆಕಂಡಿತು. ಅದೇ ಸರಣಿಯಲ್ಲಿ ಇದೀಗ ‘ಲವ್ ಮಾಕ್ಟೇಲ್ 3’ ತೆರೆಗೆ ಬರಲು ಸಜ್ಜಾಗಿದೆ.

“ಹಿಂದಿನ ಎರಡು ಸಿನಿಮಾಗಳು ಗಂಡು ಹೆಣ್ಣಿನ ನಡುವಿನ ಪ್ರೀತಿಯ ಬಗ್ಗೆ ಹೇಳಿದರೆ, ಇದು ಅಪ್ಪ ಮಗಳ ಬಾಂಧವ್ಯದ ಬಗ್ಗೆ ಮಾತನಾಡುತ್ತದೆ. ಪುಟ್ಟ ಹುಡುಗಿಯೊಂದಿಗೆ ತೆರೆ ಹಂಚಿಕೊಳ್ಳುವುದು ಭಾವನೆಗಳನ್ನು ಇನ್ನಷ್ಟು ವೈಯಕ್ತಿಕವಾಗಿಸಿದವು. ‘ಲವ್ ಮಾಕ್ಟೇಲ್’ನ ಪ್ರತಿ ಭಾಗವೂ ಪ್ರೀತಿಯ ನಾನಾ ರೂಪಗಳನ್ನು ತೆರೆದಿಡುತ್ತದೆ” ಎಂದು ವಿವರಿಸಿದ್ದಾರೆ.

‘ಲವ್ ಮಾಕ್ಟೇಲ್ 3’ನಲ್ಲಿ ಬಾಲನಟಿ ಸಂವೃತಾ ಜೊತೆ ಕೃಷ್ಣ ನಟಿಸಿದ್ದಾರೆ. 35 ದಿನಗಳಲ್ಲಿ ಶೂಟಿಂಗ್ ಮುಗಿದಿದ್ದು, ‘ಲವ್ ಮಾಕ್ಟೇಲ್’ ಹಳೇ ಕಾಸ್ಟಿಂಗ್ ಇದರಲ್ಲಿದೆ. ಅಮೃತಾ ಅಯ್ಯಂಗಾರ್, ರೇಚಲ್ ಡೇವಿಡ್, ಅಭಿಲಾಶ್, ಸುಷ್ಮಿತಾ ಭಟ್, ಶ್ವೇತಾ ಜೊತೆಗೆ ಮತ್ತಷ್ಟು ಹೊಸ ಮುಖಗಳನ್ನು ಪರಿಚಯಿಸಲಾಗಿದೆ. ■

